## ಬಿಎ ಪಾಸಾದ ಹುಡುಗಿ!



ಶಿಲ್ಪಾ ಶುಕ್ಲ ಎಂಬ ನಟಿಯತ್ತ ಇಡೀ ಬಾಲಿವುಡ್ ಕಣ್ಣು ನೆಟ್ಟಿದೆ. ಆನ್‌ಲೈನ್‌ನಲ್ಲಿ ಅತಿ ಹೆಚ್ಚು ವೀಕ್ಷಣೆಗೆ ಒಳಗಾದ ವಿಡಿಯೊಗಳ ಸಾಲಿನಲ್ಲಿದೆ ಆಕೆ ನಟಿಸಿರುವ 'ಬಿ.ಎ. ಪಾಸ್' ಎಂಬ ಚಿತ್ರ. ಅಂದಹಾಗೆ, ಆನ್‌ಲೈನ್‌ನಲ್ಲಿ ಜನ ಮುಗಿಬಿದ್ದು ಈ ಚಿತ್ರದ ವಿಡಿಯೊ ತುಣುಕುಗಳನ್ನು ವೀಕ್ಷಿಸುತ್ತಿರುವುದು ಅದರಲ್ಲಿನ ಪ್ರಚೋದನಕಾರಿ ದೃಶ್ಯಗಳಿಗಾಗಿ. ಈ ವಾರ ತೆರೆಕಾಣುತ್ತಿರುವ ಈ ಸಿನಿಮಾ ಕುತೂಹಲ ಮೂಡಿಸಿರುವುದು ಇದೇ ಕಾರಣಕ್ಕಾಗಿ. ಸದಾ ಸುದ್ದಿಯಲ್ಲಿರುವ ನಟಿಯರ ನಡುವೆ ಶಿಲ್ಪಾ ಸದ್ದು ಮಾಡಿದ್ದು ಕಡಿಮೆ. ಹೀಗಾಗಿ ಶಿಲ್ಪಾರನ್ನು ಪರಿಚಯಿಸಬೇಕೆಂದರೆ 'ಚಕ್ ದೇ ಇಂಡಿಯಾ'ದ ಹುಡುಗಿ ಎನ್ನಬಹುದು. 'ಬಿ.ಎ ಪಾಸ್'ನಲ್ಲಿನ ಶಿಲ್ಪಾ ಗ್ಲಾಮರ್ ಚಿತ್ರಗಳು ಪಡ್ಡೆ ಹೈಕಳ ಮೈಬೆಚ್ಚಗಾಗಿಸಿವೆ. ಸಿಕ್ಕಾಪಟ್ಟೆ ಹಾಟ್ ಆಗಿ ಶಿಲ್ಪಾ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ.

ಆದರೆ 'ಬಿ.ಎ. ಪಾಸ್' ಚಿತ್ರ ಲೈಂಗಿಕತೆಯನ್ನು ಬಿಂಬಿಸುವ ಚಿತ್ರವಲ್ಲ ಎನ್ನುತ್ತಾರೆ ಶಿಲ್ಪಾ ಶುಕ್ಲ. ಬಿ.ಎ. ಪಾಸ್‌ನಲ್ಲಿ ಅವರದು ಮಧ್ಯವಯಸ್ಕ ವಿವಾಹಿತೆಯ ಪಾತ್ರ. ಅವರಲ್ಲಿನ ದಿಟ್ಟತನವೇ ಈ ಬಗೆಯ ಪಾತ್ರವನ್ನು ಒಪ್ಪಿಕೊಳ್ಳಲು ಪ್ರೇರಣೆ ನೀಡಿದೆಯಂತೆ. ಫೋನ್‌ನಲ್ಲಿಯೇ ಕಥೆ ಕೇಳಿದ ಶಿಲ್ಪಾ ಅಪ್ಪ ಅಮ್ಮನ ಒಪ್ಪಿಗೆ ಸಿಕ್ಕ ಬಳಿಕವೇ ನಟಿಸಲು ಒಪ್ಪಿಕೊಂಡಿದ್ದು. ಸಿಕ್ಕಾಪಟ್ಟೆ ಚೂಸಿಯಾಗಿರುವ ಶಿಲ್ಪಾ ಪಾತ್ರವನ್ನು ಅಳೆದೂ ತೂಗಿ ಒಪ್ಪಿಕೊಳ್ಳುತ್ತಾರಂತೆ. ಹಾಗೆ ಒಪ್ಪಿಕೊಂಡ ಚಿತ್ರಗಳಲ್ಲಿ ಒಂದು ಈಗಾಗಲೇ ಸಾಕಷ್ಟು ಸುದ್ದಿ ಮಾಡಿರುವ 'ಗುಲಾಬ್ ಗ್ಯಾಂಗ್'. ತಮ್ಮ ಸಿನಿಮಾ ಕನಸುಗಳನ್ನು ಉದ್ದುದ್ದ ಹರಿಬಿಡುವ ಶಿಲ್ಪಾರ ಅತಿ ದೊಡ್ಡ ಕನಸೆಂದರೆ ಮಾಧುರಿ ದೀಕ್ಷಿತ್ ಜೊತೆ ತೆರೆ ಹಂಚಿಕೊಳ್ಳುವುದು ಮತ್ತು ಆ ಚಿತ್ರವನ್ನು ಶಾರೂಖ್ ಖಾನ್ ನಿರ್ಮಿಸುವುದು.



## ಸೋನಾಕ್ಷಿ ಟ್ಯಾಟೂ ಪ್ರೀತಿ

ಟ್ಯಾಟೂ ಎಂದರೆ ಸಾಕು ದುಂಡು ಮೊಗವನ್ನು ಮತ್ತಷ್ಟು ಅರಳಿಸುತ್ತಿದ್ದ ಸೋನಾಕ್ಷಿ ಸಿನ್ಹಾ, ಈಗ ಟ್ಯಾಟೂ ಹೆಸರೆತ್ತಿದರೆ ಮುಖ ಸಪ್ಪಗಾಗಿಸುತ್ತಿದ್ದಾರೆ. ಇಡೀ ದೇಹವನ್ನು ಟ್ಯಾಟೂವಿನಿಂದ ಸಿಂಗರಿಸಿಕೊಳ್ಳುವುದು ಇಷ್ಟ ಎಂದು ಹೇಳಿಕೊಳ್ಳುತ್ತಿದ್ದ 'ದಬಾಂಗ್ ಹುಡುಗಿ'ಗೆ ಟ್ಯಾಟೂ ಜಪ ದಿಢೀರನೆ ತಣ್ಣಗಾಗಲು ಕಾರಣ ಆಕೆಯ ಅಮ್ಮ. ಟ್ಯಾಟೂ ವ್ಯಾಮೋಹಿ ಮಗಳ ಬಯಕೆಗೆ ಅಮ್ಮ ಪೂನಂ ಸಿನ್ಹಾ ಕಡ್ಡಿಮುರಿದಂತೆ ಕಡಿವಾಣ ಹಾಕಿದ್ದಾರಂತೆ. ಟ್ಯಾಟೂ ಅಲಂಕಾರಕ್ಕೆ ಅಮ್ಮನ ಮನವೊಲಿಸಲು ಪ್ರಯತ್ನಿಸುತ್ತಿದ್ದ ಸೋನಾಕ್ಷಿಗೆ ಅಮ್ಮ ಕೆಂಪು ನಿಶಾನೆ ತೋರಿಸಿದ್ದಾರೆ.

ಪೂನಂ ಸಿನ್ಹಾರ ಮನಪರಿವರ್ತನೆಯಾಗಿ ಸೋನಾಕ್ಷಿ ಆಸೆ ಈಡೇರುವಂತಾಗಲಿ ಎಂದು ಆಕೆಯ ಅಭಿಮಾನಿಗಳು ಪ್ರಾರ್ಥಿಸುತ್ತಿದ್ದಾರಂತೆ. ಅದರ ಬೆನ್ನಲ್ಲೇ ಸೋನಾಕ್ಷಿ ಯಾವ ಆಕಾರದ ಟ್ಯಾಟೂವನ್ನು ದೇಹದ ಮೇಲೆ ಮುದ್ರಿಸಿಕೊಳ್ಳಬಹುದು ಎಂಬ ಚರ್ಚೆಯೂ ಶುರುವಾಗಿದೆ. ಸ್ವತಃ ಟ್ಯಾಟೂ ಹಂಬಲ ಹೊಂದಿರುವ ಸೋನಾಕ್ಷಿ ಯಾವ ಚಿತ್ರವನ್ನು ಅಂಟಿಸಿಕೊಳ್ಳುವುದೆಂದು ನಿರ್ಧರಿಸಿಲ್ಲ. ನಿರ್ಧರಿಸಿದರೂ ಅಮ್ಮನ ಒಪ್ಪಿಗೆಯಿಲ್ಲದೆ ಮುಂದುವರಿಯುವಂತಿಲ್ಲ. ಸೋನಾಕ್ಷಿ ಟ್ಯಾಟೂ ಪ್ರಸಂಗ ಇಷ್ಟಕ್ಕೇ ಅಂತ್ಯಗೊಳ್ಳುವುದೋ ಮುಂದುವರಿಯುವುದೋ ಕಾದು ನೋಡಬೇಕು.



## ಪಿಗ್ಗಿ-ಶಾಹಿದ್ ಮತ್ತೆ ಜೋಡಿ?

ಪ್ರಿಯಾಂಕಾ ಚೋಪ್ರಾ ಮತ್ತು ಶಾಹಿದ್‌ಕಪೂರ್ ಮತ್ತೆ ಜೋಡಿಯಾಗಿ ನಟಿಸಲಿದ್ದಾರೆಯೇ? ಹೌದು ಎಂಬ ಸುದ್ದಿ ಬಿ-ಟೌನಿನಲ್ಲಿ ಉಸಿರಾಡುತ್ತಿದೆ. ಈ ಮಾಜಿ ಪ್ರಣಯ ಪಕ್ಷಿಗಳು ಮತ್ತೆ ಒಟ್ಟಿಗೆ ಹಾರಲಿವೆ ಎಂಬ ಸುದ್ದಿಗೆ ರೆಕ್ಕೆ-ಪುಕ್ಕ ಮೂಡಿರುವುದು ಮೊನ್ನೆ ಮೊನ್ನೆ ರಾತ್ರಿ ಪ್ರಿಯಾಂಕಾ ಚೋಪ್ರಾ ಬೆಳಗಿನ ಜಾವ ಮೂರು ಗಂಟೆ ವೇಳೆಗೆ ಶಾಹಿದ್ ಕಪೂರ್ ಮನೆಯಲ್ಲಿ ನಡೆಯುತ್ತಿದ್ದ ಪಾರ್ಟಿಗೆ ಹಾಜರಾದ ಬಳಿಕ. ಬ್ರೇಕ್‌ಅಪ್ ಆದ ಬಳಿಕ ಒಬ್ಬರ ಮುಖವನ್ನೊಬ್ಬರು ನೋಡದಂತೆ ದೂರವಾಗಿ ಈ ಜೋಡಿ ಮತ್ತೆ ಒಟ್ಟಿಗೆ ಸೇರಿದೆ. ಇತ್ತೀಚೆಗಷ್ಟೆ ಹುಮಾ ಖುರೇಷಿಯಿಂದ ನರ್ಗಿಸ್ ಫಖ್ರಿವರೆಗಿನ ನಟಿಯರೊಂದಿಗಿನ ತನ್ನ ನಂಟನ್ನು ಮುಕ್ತವಾಗಿ ಬಿಚ್ಚಿಟ್ಟಿದ್ದ ಶಾಹಿದ್, ತಾವೀಗ ಒಬ್ಬಂಟಿ ಎಂದೂ ಹೇಳಿಕೊಂಡಿದ್ದರು. ಪ್ರಿಯಾಂಕಾ ತಂದೆಯ ಮರಣದ ಬಳಿಕ ಶಾಹಿದ್ ತಮ್ಮ ನಡೆ ಬದಲಿಸಿಕೊಂಡಿದ್ದಾರೆ ಎಂಬುದು ಬಾಲಿವುಡ್ ಅಂಗಳದ ಸದ್ಯದ ಮಾತು.

■ ಅಮಿ